ಶ್ರೀ ಮಲ್ಲಿಕಾರ್ಜುನ ದಿವಟರ.—ಪ್ಲಾನ್‌ನಲ್ಲಿ ೨೦೦ ಅಶ್ವಶಕ್ತಿ ಪಂಪುಸೆಟ್ಟುಗಳನ್ನು ಬಳಸ ಬೇಕೆಂದಿದ್ದರೂ ಕೇವಲ ೧೦೦ ಅಶ್ವಶಕ್ತಿ ಪಂಪುಸೆಟ್ಟನ್ನು ಅಳವಡಿಸಲಾಗಿದೆ. ಕಡಿಮೆ ಅಶ್ವಶಕ್ತಿ ಪಂಪನ್ನು ಅಳವಡಿಸಿರುವುದರಿಂದ ನಿಗದಿಪಡಿಸಿದಷ್ಟು ಎಕರೆ ಜಮೀನಿಗೆ ನೀರಾವರಿ ಆಗುವುದಿಲ್ಲ. ಇದರಿಂದ ಪ್ರತಿ ವರ್ಷ ಬೇಸಿಗೆ ಬಿಳಿಯನ್ನೇನು ರೈತರು ಬತ್ತಾತ್ತಾರೆ ಅದು ಸರಿಯಾಗಿ ಬರುತ್ತಿಲ್ಲ. ಇದನ್ನು ಬೇಕಾದರೆ ಸರ್ಕಾರದ ಅಧಿಕಾರಿಗಳನ್ನು ಕಳುಹಿಸಿ ಪರೀಕ್ಷಿಸಬಹುದು. ಅಲ್ಲಿ ಸುಮಾರು ೫೦೦ ಎಕರೆ ಜಮೀನಿನಲ್ಲಿರ ತಕ್ಕ ಬೇಸಿಗೆ ಬೆಳೆ ಒಣಗಿದೆ. ಅಲ್ಲಿ ನಿಗದಿಪಡಿಸಿದಷ್ಟು ಅಶ್ವಶಕ್ತಿಯ ಪಂಪುಸೆಟ್ಟುಗಳನ್ನು ಬಳಸಿಲ್ಲವೆಂಬುದು ನಿರ್ವಿವಾದದ ಸಂಗತಿ. ಈ ವ್ಯವಹಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಮತ್ತು ಪಂಪನ್ನು ಒದಗಿಸಿದ ನಿರ್ಮಲ ಇಂಜಿನಿಯರಿಂಗ್ ಕಂಪನಿಯ ಮೇಲೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಒಟ್ಟು ಆಚ್ಚುಕಟ್ಟು ಪ್ರದೇಶ ಇರತಕ್ಕದ್ದು ೨೪೦೦ ಎಕರೆ. ಆದರೆ ಅಲ್ಲಿ ಯಾವ ಒಂದು ಅಶ್ವಶಕ್ತಿಯ ಪಂಪುಗಳು ಇರಬೇಕೋ ಅವು ಇಲ್ಲ. ಆದ್ದರಿಂದ ೯೦೦ ಎಕರೆ ಮಾತ್ರ ಸಾಗಾಗುತ್ತಿದೆ ಇದಕ್ಕೆಲ್ಲ ಕಾರಣವನ್ನು ಕಂಡು ಹಿಡಿಯಲು ತಜ್ಞರನ್ನು ನೇಮಿಸಬೇಕೆಂದು ಸಲಹೆ ಬಂದಿದೆ. ಆದರೆ ಪೋಟಾರು ಯಾವ ಶಕ್ತಿಯದು ಇದೆ ಎಂಬುದನ್ನು ಕಂಡುಹಿಡಿಯಲು ಅಧಿಕಾರಿಗಳನ್ನು ಕಳುಹಿಸಿಕೊಡಲಾಯಿತ್ತು, ಆದರೆ ಅವರು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದರು. ಇಂಜಿನಿಯರಿಂಗ್ ಕಂಪನಿಯ ಮೇಲೆ ಕೇಸ್ ದಾಖಲೆ ಮಾಡಬೇಕೆಂದು ನಿ.ಓ.ಡಿ.ಗೆ ರೆಫರ್ ಮಾಡಲಾಯಿತು. ಆದರೆ ಅವರು ಸರಿಯಾದ ಮಾಹಿತಿಯನ್ನು ಕೊಡಲಿಲ್ಲ. ಬಿ. ಷೀಟ್ ಕೊಟ್ಟರು, ಇದಕ್ಕೆ ಅಧಿಕಾರಿಗಳು ಕಾರಣರಾಗಿದ್ದಾರೆಯೋ ಎಂಬುದನ್ನು ಪತ್ತೆಹಚ್ಚಲು ಇಜಾರಿ ಆಯೋಗವನ್ನು ನೇಮಕ ಮಾಡಿದ್ದೇವಲ್ಲದೆ ಅವರಿಗೆ ಬೇಕಾದ ಸಿಬ್ಬಂದಿ ವರ್ಗವನ್ನು ಕೂಡ ಒದಗಿಸಿಕೊಟ್ಟಿದ್ದೇವೆ. ಅವರು ಏನು ವರ ಕೊಡುತ್ತಾರೆ ಅದನ್ನು ಪಾಲಿಸುತ್ತೇವೆ.

ಶ್ರೀ ಮಲ್ಲಿಕಾರ್ಜುನ ದಿವಟರ.—ಕಳೆದ ೩-೪ ವರ್ಷಗಳಿಂದ, ಪ್ರತಿ ವರ್ಷ ರೈತರು ಬೇಸಿಗೆಯಲ್ಲಿ ಬಿತ್ತಿದ ಬೆಳೆ ಎಲ್ಲ ಒಣಗಿ ಹೋಗುತ್ತಿದೆ. ಸಂಬಂಧಪಟ್ಟ ಇಲಾಖೆಯವರು ಕೂಡ ಬೀಜ ಬಿತ್ತಬೇಡಿ, ನೀರು ಪೂರೈಕೆಯಾಗುವುದಿಲ್ಲವೆಂದು ಹೇಳಲಿಲ್ಲ. ಹೀಗಾಗಿ ಪ್ರತಿ ವರ್ಷ ರೈತರು ನಷ್ಟವನ್ನು ಅನುಭವಿಸಿಕೊಂಡು ಬಂದಿದ್ದಾರೆ. ಆದ್ದರಿಂದ, ೩-೪ ವರ್ಷದ ನೀರಿನ ತೆರಿಗೆ ಮತ್ತಿತರ ತೆರಿಗೆಗಳನ್ನು ಆ ಭಾಗದ ಜನರಿಗೆ ಮನ್ನಾ ಮಾಡಿ ಆ ನಷ್ಟವನ್ನು ತುಂಬಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—೪ನೆ ಮತ್ತು ೪೭ನೇ ಪ್ರಶ್ನೆಗಳು ಒಂದೇ ವಿಷಯಕ್ಕೆ ಸಂಬಂಧ ಪಟ್ಟವಾದ್ದರಿಂದ ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬಹುದು. ಅದರಿಂದ ಸಭೆಯ ಕಾಲ ಸ್ವಲ್ಪ ಉಳಿತಾಯವಾಗುತ್ತದೆ.

ತುಂಗಾ ಮೇಲ್ದಂಡೆ ಯೋಜನೆ

೪೫. ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲಾ ತುಂಗಾ ಆಣೆಕಟ್ಟೆಯನ್ನು ವಿಸ್ತರಿಸಿ ಹೊನ್ನಾಳಿ, ಹರೇಕೆರೂರು, ರಾಣಿ ಬೆನ್ನೂರು ಮತ್ತು ಮುಂಡರಗಿ ತಾಲ್ಲೂಕುಗಳ ಜಮೀನುಗಳಿಗೆ ನೀರನ್ನು ಒದಗಿಸಲು ಈ ಹಿಂದೆ ಒಂದು ಅಂದಾಜು ತಯಾರಾಗಿದ್ದು ಇದುವರೆವಿಗೂ ಕಾರ್ಯಗತವಾಗಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಮುಂದೆ ಯಾವ ಕ್ರಮ ಕೈಗೊಳ್ಳುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ವಿವರವಾದ ಯೋಜನಾ ವರದಿ ಸಿದ್ಧವಾದ ನಂತರ, ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.